

ಪ್ರೇಮಾನುಭವದ ವಾಚ್ಯ ದರ್ಶನಕ್ಕು ಇಲ್ಲಿನ ಸೂಕ್ಷ್ಮಕ್ಕೂ ಇರುವ ವ್ಯತ್ಯಾಸವೇ ನಿರ್ದೇಶಕರ ನಾಜೂಕುತನಕ್ಕೆ ಹಿಡಿದ ಕನ್ನಡಿ.

ಜಾನು ಗಾಯಕಿ. ಅವಳಿಗೆ ಹಾಡೇ ಜಗತ್ತು. ಕರಿವರದನಾದ ನಮ್ಮ ನಾಯಕನಿಗೆ ಅವಳೇ ಜಗತ್ತೆಂದ ಮೇಲೆ ಅದರೊಟ್ಟಿಗೆ ಹಾಡೂ ಬೆಸೆದೇ ಇರುತ್ತದಲ್ಲ. ಹೀಗೆ ನಿರ್ದೇಶಕ ಸಿ. ಪ್ರೇಮ್ ಕುಮಾರ್ ಸಿನಿಮಾವನ್ನು ದೃಶ್ಯವಾಗಿಯಷ್ಟೇ ಮಧುರವಾಗಿಸದೆ ಸಂಗೀತದ ದೃಷ್ಟಿಯಿಂದಲೂ ಸುಮಧುರವಾಗಿಸುತ್ತಾರೆ. ಜಾನು ಸ್ವರದ ತಲೆ ಮೇಲೆ ಕುಳಿತು ಹಾಡತೊಡಗಿದಳೆಂದರೆ ನಾವೂ ತಲೆದೂಗಬೇಕು, ನಾಯಕನೋ ಕಳೆದುಹೋಗುತ್ತಾನೆ. ಅವನಿಗೆ 'ಯಮುನೈ ಆಟ್ರಿಲೆ' ಎಂಬ ಹಾಡನ್ನು ಅವಳ ಕಂಠದಲ್ಲಿ ಕೇಳುವಾಸೆ. ಆದರೆ, ನೇರವಾಗಿ ಹೇಳಿಕೊಳ್ಳಲಾರ. ಸ್ನೇಹಿತರ ಮೂಲಕ ಹೇಳಿಸಿದರೂ ಅವಳದ್ದು ದಿವ್ಯ ಉಪೇಕ್ಷೆ. ಸುತರಾಂ ಅದನ್ನು ಹಾಡುವುದೇ ಇಲ್ಲ.

ಅವಳು ಈ ಹಾಡನ್ನು ಅವನೆದುರು ಹಾಡುವುದು ಯಾವಾಗ?

ಅಪ್ಪಿ ತಪ್ಪಿ ಅವಳು ಸ್ಪರ್ಶಿಸಿದರೆ ಅವನೆದೆ ಬಡಿತ ಜೋರು; ಮೂರ್ಛೆ ಹೋಗುವಷ್ಟು. ಅದಕ್ಕೇ ಸದಾ ಅವರಿಬ್ಬರ ನಡುವೆ ಒಂದು ಅಂತರ. ಆದರೂ ಅದೆಷ್ಟೊಂದು ಹತ್ತಿರ?

ಹತ್ತನೇ ತರಗತಿಯ ಓದು ಮುಗಿದ ಮೇಲೆ ಇಬ್ಬರದೂ ಬೇರೆ ಬೇರೆ ದಿಕ್ಕು. ಅವನ ಬಿಳಿ ಅಂಗಿ ಮೇಲೆ ಅವಳು ಸಿಂಪಡಿಸಿದ ನೀಲಿ ಇಂಕು.

ಇಂಥ ರಾಮ್ ಹಾಗೂ ಜಾನು ಮತ್ತೆ ಭೇಟಿಯಾಗುತ್ತಾರೆ; 22 ವರ್ಷಗಳ ನಂತರ; ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಗಮದ ಕಾರ್ಯಕ್ರಮದಲ್ಲಿ. ಅಲ್ಲೂ ಅವಳು ಬರುವ ಹೊತ್ತಿಗೆ ಅವನು ಮರೆಯಲ್ಲಿ ನಿಂತು, ಕೈಯಲ್ಲಿ ಹಿಡಿದ ಪಿಂಕು ಬಲೂನನ್ನು ಗಾಬರಿಯಲ್ಲಿ ಒಡೆದುಹಾಕುತ್ತಾನೆ. ಹಸಿದ ಅವಳಿಗೆ ತಟ್ಟೆ ತುಂಬ ಬಡಿಸಿ ತಂದು ಮುಂದಿಡುತ್ತಾನೆ. ಅವಳು ಉಣ್ಣುವುದನ್ನು ನೋಡುವಾಗ ಅವನಿಗೆ ಪ್ರಸನ್ನತೆ. 'ನೀನೂ ಉಣ್ಣು' ಎಂದು ತಟ್ಟೆಯನ್ನು ಅವನ ಬಳಿಗೆ ಸರಿಸಿದಾಗಲಂತೂ ಅವನ ಪಾಲಿಗೆ ಅದು ಪರಮಾನ್ನ. ಸ್ನೇಹಿತರ ಬಾಯಲ್ಲಿ 'ಜಾನು' ಎಂಬ ಹೆಸರು ಕೇಳಿದರೆ ಅವನಲ್ಲಿ ದಿವ್ಯ ಮೌನ.